# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**AKKAMAHADEVI WOMEN'S UNIVERSITY, VIJAYAPURA**

ಕುಲಸಚಿವರು(ಮೌಲ್ಯಮಾಪನ) | Registrar(Evaluation)

ವಿಜಯಪುರ-586108 | Vijayapura-586108


ಸಂಖ್ಯೆ:ಅಮವಿವಿ/ಪವಿ/2017-18/ 6822 ದಿನಾಂಕ:24-03-2018

**ಪ್ರಾಂಶುಪಾಲರ ವೈಯಕ್ತಿಕ ಗಮನಕ್ಕಾಗಿ**

**ವಿಷಯ: ಘಟಿಕೋತ್ಸವ ಶುಲ್ಕ ಭರಿಸುವ ಕುರಿತು ಸ್ಪಷ್ಟೀಕರಣ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಅಮವಿವಿ/ಪವಿ/2017-18/6589 ದಿನಾಂಕ: 16-03-2018 ರ ಕುರಿತು ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ.

ಈ ಮೇಲೆ ಹೇಳಿರುವ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರದ ಅಧಿಸೂಚನೆಯಲ್ಲಿ ಪರೀಕ್ಷೆಯ ಯಾವುದೇ ಶುಲ್ಕ ಹೆಚ್ಚಳ ಮಾಡಿರುವುದಿಲ್ಲ. ಆದರೆ ಸ್ನಾತಕ ಪದವಿಯ ಅಂತಿಮ ಸೆಮಿಸ್ಟರ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರು ಮಾತ್ರ 1000 ರೂಪಾಯಿಗಳ ಘಟಿಕೋತ್ಸವದ ಶುಲ್ಕ ಭರಿಸಬೇಕಾಗಿದೆ. ವಿದ್ಯಾರ್ಥಿನಿಯರು ಪದವಿ ಪೂರೈಸಿದ ನಂತರ ಘಟಿಕೋತ್ಸವದ ಪ್ರಮಾಣ ಪತ್ರ ಪಡೆಯಲು ಈ ಶುಲ್ಕ ಭರಿಸುತ್ತಾ ಬಂದಿದ್ದಾರೆ. ಆದರೆ ಈಗ ವಿಶ್ವವಿದ್ಯಾಲಯಗಳ ಧನ ಸಹಾಯ (UGC) ನವದೆಹಲಿಯು ದಿನಾಂಕ: 09-07-2017 ರಿಂದ ಇಲ್ಲಿಯವರೆಗೆ ಎಲ್ಲ ವಿಶ್ವವಿದ್ಯಾಲಯಗಳು (NAD) National Academic Depository ಗೆ ನೊಂದಾಯಿಸಿಕೊಳ್ಳಬೇಕು. ಅದರ ಮುಖಾಂತರ ವಿದ್ಯಾರ್ಥಿ ವಿದ್ಯಾರ್ಥಿನಿಯರ ಎಲ್ಲ ತರಹದ ಪ್ರಮಾಣ ಪತ್ರಗಳನ್ನು ಡಿಜಿಟಲಿಕರಣಕ್ಕೆ ಒಳಪಡಿಸಲು ನಿರ್ದೇಶನ ನೀಡಲಾಗಿದೆ. ಈ ಪ್ರಕ್ರಿಯೆ 2019 ಒಳಗೆ ಪೂರ್ಣಗೊಳ್ಳಬೇಕಾಗಿದೆ. ಆದ್ದರಿಂದ ಇನ್ನು ಮುಂದೆ ವಿಶ್ವವಿದ್ಯಾನಿಲಯದಿಂದ ಪದವಿ ಪಡೆಯುವ ವಿದ್ಯಾರ್ಥಿನಿಯರ ಪದವಿ ಪ್ರಮಾಣ ಪತ್ರಗಳನ್ನು National Academic Depository ಗೆ ಅಪ್‌ಲೋಡ್ ಮಾಡಬೇಕಾಗುತ್ತದೆ. ಹೀಗೆ ಅಪ್‌ಲೋಡ್ ಮಾಡಬೇಕಾದರೆ ವಿದ್ಯಾರ್ಥಿನಿಯರು ಘಟಿಕೋತ್ಸವದ ಶುಲ್ಕ ಭರಿಸಿದ್ದರೆ ಮಾತ್ರ ಘಟಿಕೋತ್ಸವದ ಪ್ರಮಾಣ ಪತ್ರ ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ 6ನೇ ಸೆಮಿಸ್ಟರ್ ವಿದ್ಯಾರ್ಥಿನಿಯರು ಮಾತ್ರ 1000 ರೂಪಾಯಿಗಳ ಘಟಿಕೋತ್ಸವ ಶುಲ್ಕ ಭರಿಸಲು ಸೂಚಿಸಲಾಗಿದೆಯೇ ಹೊರತು ಪರೀಕ್ಷಾ ಶುಲ್ಕದಲ್ಲಿ ಯಾವುದೇ ಹೆಚ್ಚಳ ಮಾಡಿರುವುದಿಲ್ಲ ಎಂದು ಈ ಮೂಲಕ ಸ್ಪಷ್ಟೀಕರಣ ನೀಡಲಾಗಿದೆ.

National Academic Depository ಕಾರ್ಯಕ್ರಮದ ಉದ್ದೇಶವೇನೆಂದರೆ ವಿದ್ಯಾರ್ಥಿಗಳಿಗೆ ಸಂಬಂಧಿತ ಪ್ರಮಾಣಪತ್ರಗಳು ಆನ್‌ಲೈನ್‌ನಲ್ಲಿ ಅವರಿರುವ ಸ್ಥಳಗಳಲ್ಲಿ ಲಭ್ಯವಾಗುವಂತೆ ಅವಕಾಶ ಮಾಡಿಕೊಡುವುದಾಗಿದೆ. ಇದಲ್ಲದೇ ಉದ್ಯೋಗ ಒದಗಿಸುವ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕಾರ್ಖಾನೆಗಳು, ಸಂಶೋಧನಾ ಸಂಸ್ಥೆಗಳು ಇತ್ಯಾದಿ ನೇಮಕಾತಿಗಾಗಿ ವಿದ್ಯಾರ್ಹತೆಯನ್ನು ಸಂಬಂಧಿತ ಪ್ರಮಾಣಪತ್ರಗಳನ್ನು ಕೇಳುವಾಗ ಅಂಕಪಟ್ಟಿ ಪ್ರಮಾಣದ ಜೊತೆಗೆ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಕೂಡ ಕೇಳುತ್ತಿದ್ದಾರೆ. ಏಕೆಂದರೆ ಘಟಿಕೋತ್ಸವ ಪ್ರಮಾಣ ಪತ್ರವು ಕುಲಪತಿಗಳು ಹಾಗೂ ಕುಲಾಧಿಪತಿಗಳಿಂದ ಸ್ವೀಕೃತವಾಗಿ ಧೃಢೀಕರಿಸಲ್ಪಟ್ಟ ವಿದ್ಯಾರ್ಹತೆಯ ಪ್ರಮಾಣ ಪತ್ರವಾಗಿರುತ್ತದೆ. ಈ ಪ್ರಮಾಣ ಪತ್ರವು ಪದವಿ ಮುಗಿದ ತಕ್ಷಣ ಪಡೆದುಕೊಂಡಿದ್ದರೆ (NAD) National Academic

Depository ವೆಬ್‌ಸೈಟ್‌ನಲ್ಲಿ ಸದಾ ಕಾಲ ಲಭ್ಯವಿರುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಹಾಗೂ ಉದ್ಯೋಗದಾತರು ವಿದ್ಯಾರ್ಥಿಗಳ ಅನುಮತಿ ಪಡೆದು ಪ್ರಮಾಣ ಪತ್ರಗಳನ್ನು ಪಡೆಯಬಹುದಾಗಿರುತ್ತದೆ.

ಒಂದು ವೇಳೆ ವಿದ್ಯಾರ್ಥಿಗಳು ಪದವಿ ಮುಗಿದ ತಕ್ಷಣ ಘಟಿಕೋತ್ಸವ ಪ್ರಮಾಣ ಪತ್ರ ಪಡೆಯದಿದ್ದರೆ ಒಪ್ಪಿಕೊಳ್ಳಬಹುದಾದ ಪದವಿಯ ಪ್ರಮಾಣಪತ್ರವು ಸಂದರ್ಶನದ ವೇಳೆಯಲ್ಲಾಗಲಿ, ಅಥವಾ ಪರಿಶೀಲನೆಯ ವೇಳೆಯಲ್ಲಾಗಲಿ ಲಭ್ಯವಾಗುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳ ಸಮಯದಲ್ಲಿ ತೊಂದರೆಯಾಗಬಾರದೆಂಬ ಕಾರಣಕ್ಕಾಗಿ ಕೊನೆಯ ಸೆಮಿಸ್ಟರ್‌ನಲ್ಲಿ ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕವನ್ನು ಕಡ್ಡಾಯಗೊಳಿಸಲಾಗಿದೆ.

ವಿದ್ಯಾರ್ಥಿಗಳು ತಮಗೆ ಸಂಬಂಧಿತ ಎಲ್ಲ ಪ್ರಮಾಣಪತ್ರಗಳನ್ನು (NAD) National Academic Depository ವೆಬ್‌ಸೈಟ್ ಮುಖಾಂತರ ತಮ್ಮ ಸ್ಥಳಗಳಲ್ಲಿಯೇ ಪಡೆಯುವುದರಿಂದ ವಿಶ್ವವಿದ್ಯಾಲಯಗಳಿಗೆ ಖುದ್ದಾಗಿ ಭೇಟಿ ನೀಡಿ, ಪ್ರಮಾಣಪತ್ರಗಳನ್ನು ಪಡೆಯುವ ತೊಂದರೆಯನ್ನು ತಪ್ಪಿಸಬಹುದಾಗಿದೆ. ಈ ಕಾರಣಕ್ಕಾಗಿ 6ನೆಯ ಸೆಮಿಸ್ಟರ್ ವಿದ್ಯಾರ್ಥಿನಿಯರು ಪರೀಕ್ಷೆಗೆ ನೊಂದಾಯಿಸಿಕೊಳ್ಳುವಾಗ ವಿದ್ಯಾರ್ಥಿಗಳ ಆಧಾರ ಸಂಖ್ಯೆ ಹಾಗೂ ಈ-ಮೇಲ್‌ಐಡಿ ಕಡ್ಡಾಯವಾಗಿ ಮಾಡಲಾಗಿದೆ.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೈಕೊಂಡ ಮೇಲೆ ನಮೂದಿಸಿದ ಎಲ್ಲ ಸುಧಾರಣಾ ಕ್ರಮಗಳಿಗೆ ಸ್ಪಂದಿಸಬೇಕೆಂದು ಪ್ರಾಂಶುಪಾಲರಲ್ಲಿ ವಿನಂತಿಸುತ್ತಾ ಸೂಕ್ತ ಮಾರ್ಗದರ್ಶನದೊಂದಿಗೆ ವಿದ್ಯಾರ್ಥಿಗಳ ಗಮನಕ್ಕೆ ತರಲು ಕೋರಲಾಗಿದೆ.

24/3

ಕುಲಸಚಿವರು(ಮೌಲ್ಯಮಾಪನ)
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

ಗೆ,

**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ, ಅಧೀನಕ್ಕೊಳಪಟ್ಟ ಎಲ್ಲಾ ಮಹಿಳಾ ಮಹಾವಿದ್ಯಾನಿಲಯಗಳ, ಪ್ರಾಂಶುಪಾಲರಿಗೆ.**

ಪ್ರತಿ ಮಾಹಿತಿಗಾಗಿ:

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಅ.ಮ.ವಿ.ವಿ, ವಿಜಯಪುರ.
2. ಕುಲಸಚಿವರ ಆಪ್ತ ಸಹಾಯಕರು, ಅ.ಮ.ವಿ.ವಿ, ವಿಜಯಪುರ.
3. ಆರ್ಥಿಕ ಅಧಿಕಾರಿಗಳು, ಅ.ಮ.ವಿ.ವಿ, ವಿಜಯಪುರ.
4. ಕಛೇರಿ ಪ್ರತಿ.